# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 137 (11) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಾ.ಬಿ.ಜಿ.ಪಾಟೀಲ್ |
| ಉತ್ತರಿಸುವ ದಿನಾಂಕ | : | 17-08-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳ ಸಂಖ್ಯೆ ಎಷ್ಟು;</td><td rowspan="2">ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಲಾಗುತ್ತಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಜಿಲ್ಲೆ</th><th>ವಿದ್ಯಾರ್ಥಿ ನಿಲಯಗಳ ಸಂಖ್ಯೆ</th><th>ವಿದ್ಯಾರ್ಥಿಗಳ ಸಂಖ್ಯೆ</th><th>ವಿದ್ಯಾರ್ಥಿ ನಿಲಯಗಳ ಸಂಖ್ಯೆ</th><th>ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>1</td><td>ಕಲಬುರಗಿ</td><td>72</td><td>5373</td><td>38</td><td>7231</td></tr>
<tr><td>2</td><td>ಯಾದಗಿರಿ</td><td>38</td><td>2697</td><td>15</td><td>2514</td></tr>
</table>
ಪ್ರತಿಯೊಬ್ಬ ವಿದ್ಯಾರ್ಥಿಗೆ ವೆಚ್ಚ ಮಾಡಲಾಗುತ್ತಿರುವ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಆ)</td><td>ಮೇಲ್ಕಂಡ ಜಿಲ್ಲೆಗಳಲ್ಲಿನ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾಸಿಕ ಸರ್ಕಾರ ಎಷ್ಟು ಹಣವನ್ನು ವಿನಿಯೋಗಿಸುತ್ತಿದೆ; (ವಿವರ ನೀಡುವುದು)</td></tr>
<tr><td>ಇ)</td><td>ಸದರಿ ವಸತಿ ನಿಲಯಗಳಲ್ಲಿ ಶೌಚಾಲಯ ಹಾಗೂ ಸ್ನಾನದ ಗೃಹಗಳು ಶೋಚನೀಯ ಸ್ಥಿತಿಯಲ್ಲಿದ್ದು, ಸಂಬಂಧಪಟ್ಟ ವಸತಿ ನಿಲಯ ಪಾಲಕರು ಮೇಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಲಾಖೆಯ ವತಿಯಿಂದ ನಡೆಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳಲ್ಲಿ ಅಗತ್ಯ ದುರಸ್ತಿ/ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕಳೆದ ಮೂರು ವರ್ಷಗಳಲ್ಲಿ ರೂ.1099.33 ಲಕ್ಷಗಳನ್ನು ಮಂಜೂರು ಮಾಡಲಾಗಿರುತ್ತದೆ. ಮುಂದುವರೆದು, ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿನ ಶೌಚಾಲಯ ಮತ್ತು ಸ್ನಾನಗೃಹಗಳಲ್ಲಿ ಶುಚಿತ್ವ ಮತ್ತು ನೈರ್ಮಲ್ಯತೆಯನ್ನು ಕಾಪಾಡುವ ಸಂಬಂಧ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಕಛೇರಿಯಿಂದ ದಿನಾಂಕ:10-08-2023 ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಅದರನ್ವಯ ಶೌಚಾಲಯ ಮತ್ತು ಸ್ನಾನಗೃಹಗಳಲ್ಲಿ ಶುಚಿತ್ವ ಮತ್ತು ನೈರ್ಮಲ್ಯತೆಯನ್ನು ಕಾಪಾಡಲು ಕ್ರಮವಹಿಸಲಾಗುತ್ತಿದೆ.</td></tr>
</table>

| | | |
|---|---|---|
| ಈ) | ಹೆಚ್ಚುವರಿಯಾಗಿ ಹೊಸ ಸ್ನಾನದ ಗೃಹ ಹಾಗೂ ಶೌಚಗೃಹದ ಅವಶ್ಯಕತೆ ಇರುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿದ್ದರೂ ಇದುವರೆವಿಗೂ ಪ್ರಸ್ತಾವನೆಗೆ ಅನುಮೋದನೆ ದೊರೆತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಸದರಿ ಪ್ರಸ್ತಾವನೆಗೆ ಯಾವ ಕಾಲಮಿತಿಯೊಳಗೆ ಅನುಮೋದನೆ ನೀಡಲಾಗುವುದು? | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿ ಶೌಚಾಲಯ/ ಸ್ನಾನಗೃಹಗಳನ್ನು ನಿರ್ಮಿಸುವ ಸಂಬಂಧವಾಗಿ ಜಿಲ್ಲೆಯಿಂದ ಆಯುಕ್ತರ ಕಛೇರಿಗೆ ಯಾವುದೇ ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ.<br><br>2026-27ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಡಾ.ಬಿ.ಆರ್ .ಅಂಬೇಡ್ಕರ್ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಅಗತ್ಯವಿರುವ ಹೆಚ್ಚುವರಿ ಕೊಠಡಿ/ ಶೌಚಾಲಯ/ಸ್ನಾನಗೃಹಗಳ ನಿರ್ಮಾಣ ಹಾಗೂ ಅಗತ್ಯ ದುರಸ್ತಿ/ಉನ್ನತೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿ/ಮಾಹಿತಿಯೊಂದಿಗೆ ಜಿಲ್ಲಾಧಿಕಾರಿಗಳ ಮೂಲಕ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಆಯುಕ್ತರ ಕಛೇರಿಯಿಂದ ದಿನಾಂಕ:29-05-2026 ರ ಪತ್ರದ ಮುಖೇನ ತಿಳಿಸಲಾಗಿದ್ದು, ಜಿಲ್ಲೆಯಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ, ಅನುದಾನ ಲಭ್ಯತೆಯನ್ನು ಆಧರಿಸಿ ನಿಯಮಾನುಸಾರ ಪರಿಶೀಲಿಸಲಾಗುವುದು. |

**ಸಕಇ 756 ಪಕವಿ 2026**

**(ಕೆ.ಹೆಚ್.ಮುನಿಯಪ್ಪ)**
**ಸಮಾಜ ಕಲ್ಯಾಣ ಸಚಿವರು**

## ಅನುಬಂಧ-1

### ಇಲಾಖೆ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ.

| ಮೆಟ್ರಿಕ್ ಪೂರ್ವ ವಿ ನಿಲಯಗಳು | ಮೆಟ್ರಿಕ್ ನಂತರ ವಿ ನಿಲಯಗಳು |
|---|---|
| • ಮಾಹೆಯಾನ ರೂ.1750.00/-ರ ವೆಚ್ಚದಲ್ಲಿ ಭೋಜನ.<br>• ಮಾಹೆಯಾನ ರೂ.171.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್.<br>• ಮಾಹೆಯಾನ ರೂ.230.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು.<br>• ವಾರ್ಷಿಕ ರೂ.752.00 ರಿಂದ 1102.00ರ ವೆಚ್ಚದಲ್ಲಿ 02 ಜೊತೆ ಸಮವಸ್ತ್ರಗಳು.<br>• ವಾರ್ಷಿಕ ರೂ.363.39ರ ವೆಚ್ಚದಲ್ಲಿ 01 ಜೊತೆ ಶೂ ಮತ್ತು ಸಾಕ್ಸ್.<br>• ವಾರ್ಷಿಕ ರೂ.400.00ರ ವೆಚ್ಚದಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿ.<br>• ವಾರ್ಷಿಕ ರೂ.150.00 ರ ವೆಚ್ಚದಲ್ಲಿ ಬಾಲಕರಿಗೆ ಕ್ಷೌರದ ವೆಚ್ಚ.<br>• ಮೂರು ವರ್ಷಕ್ಕೊಮ್ಮೆ ರೂ.800.00 ವೆಚ್ಚದಲ್ಲಿ ಹಾಸಿಗೆ ಹೊದಿಕೆ.<br>• ಪ್ರತಿ ನಿಲಯಕ್ಕೆ ವಾರ್ಷಿಕ ರೂ.3000.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ.<br>• 50 ವಿದ್ಯಾರ್ಥಿಗಳ ಸಂಖ್ಯೆಯ ಪ್ರತಿ ನಿಲಯಕ್ಕೆ ವಾರ್ಷಿಕ ರೂ.5000.00 ರ ವೆಚ್ಚದಲ್ಲಿ ಹಾಗೂ 100 ವಿದ್ಯಾರ್ಥಿಗಳ ಸಂಖ್ಯೆ ಮೀರಿದ ಪ್ರತಿ ನಿಲಯಕ್ಕೆ ವಾರ್ಷಿಕ ರೂ.8000.00ಗಳ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ.<br>• ವರ್ಷದಲ್ಲಿ 6 ತಿಂಗಳು ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಇತರ ಸಾಮಾನ್ಯ ವಿಷಯಗಳಲ್ಲಿ 03 ಅರೆ ಕಾಲಿಕ ಬೋಧಕರಿಂದ ವಿಶೇಷ ಬೋಧನೆ.(ವಾರ್ಷಿಕ ವೆಚ್ಚ ರೂ.18,000/-)<br>• ಪ್ರತಿ ಬಾಲಕಿ ವಿದ್ಯಾರ್ಥಿನಿಯರಿಗೆ ರೂ.857.00ರ ವೆಚ್ಚದಲ್ಲಿ ಕರಾಟೆ ಸಮವಸ್ತ್ರ,<br>• ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು.<br>• ಪ್ರತಿ ನಿಲಯದ ಬಾಲಕಿಯರ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.100/-ಗಳ ಮಿತಿಯೊಳಗೆ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಒದಗಿಸುವುದು. | • ಮಾಹೆಯಾನ ರೂ.1850.00/-ರ ವೆಚ್ಚದಲ್ಲಿ ಭೋಜನ.<br>• ಮೂರು ವರ್ಷಕ್ಕೊಮ್ಮೆ ರೂ.1000.00 ವೆಚ್ಚದಲ್ಲಿ ಹಾಸಿಗೆ,ಹೊದಿಕೆ.<br>• ಪ್ರತಿ ನಿಲಯಕ್ಕೆ ವಾರ್ಷಿಕ ರೂ.3500.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ.<br>• ಮಾಹೆಯಾನ ರೂ.171.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್.<br>• ಮಾಹೆಯಾನ ರೂ.230.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು.<br>• ಪ್ರತಿ ಬಾಲಕಿ ವಿದ್ಯಾರ್ಥಿನಿಯರಿಗೆ ರೂ.857.00ರ ವೆಚ್ಚದಲ್ಲಿ ಕರಾಟೆ ಸಮವಸ್ತ್ರ,<br>• ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು<br>• ಪ್ರತಿ ನಿಲಯದ ಬಾಲಕಿಯರ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.100/-ಗಳ ಮಿತಿಯೊಳಗೆ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಒದಗಿಸುವುದು.<br>ಇಲಾಖೆಯ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಯೋಗ ತರಬೇತಿ. |